ಅ) ಇದು ಯಾವಾಗ ಪೂರ್ಣಗೊಳ್ಳುತ್ತದೆ.

ಇ) ಯೋಜನೆಯಿಂದ ಮುಳುಗಡೆಯಾಗುವ ಅರಣ್ಯ ಭೂಮಿ ಎಷ್ಟು ? ಮತ್ತು ಮನೆಗಳೆಷ್ಟು ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಜನವರಿ 96ರ ಅಂತ್ಯದವರೆಗೆ 7.44 ಕೋಟಿಗಳು ವೆಚ್ಚವಾಗಿರುವುದು. ಈ ಯೋಜನೆಯನ್ನು ಪೂರ್ಣಗೊಳಿಸಲು ಸುಮಾರು ರೂ.372 ಕೋಟಿಗಳು ಬೇಕಾಗುತ್ತದೆ.

ಆ) ಈ ಯೋಜನೆಯನ್ನು 2000ನೇ ಇಸವಿಯೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಇ) ಈಗ ಹಾಲಿ ಇರುವ ತುಂಗಾ ಅಣೆಕಟ್ಟಿಯಡಿಯಲ್ಲಿ ಮುಳುಗಡೆಯಾಗಿರುವ ಈ ಪ್ರದೇಶಕ್ಕಿಂತ ಈ ಯೋಜನೆಯಿಂದ ಯಾವುದೇ ಹೆಚ್ಚಿನ ಅರಣ್ಯ ಭೂಮಿ ಅಥವಾ ಮನೆಗಳು ಮುಳುಗಡೆ ಆಗುವುದಿಲ್ಲ.

ತೀರ್ಥಹಳ್ಳಿ ತಾಲ್ಲೂಕಿಗೆ ಏತ ನೀರಾವರಿ ಯೋಜನೆ.

305 - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತೀರ್ಥಹಳ್ಳಿ ತಾಲ್ಲೂಕಿಗೆ 1995-96ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ಆಪೆಂಡಿಕ್ಸ್ 'ಇ'ಯಲ್ಲಿ ಎಷ್ಟು ಏತ ನೀರಾವರಿ ಯೋಜನೆಗಳು ಮಂಜೂರಾಗಿವೆ, ಮತ್ತು ಯಾವ ಸ್ಥಳಕ್ಕೆ ಮಂಜೂರಾಗಿವೆ.

ಆ) ಈ ಕಾಮಗಾರಿಗಳನ್ನು ಇದುವರೆವಿಗೂ ಪ್ರಾರಂಭಿಸದಿರಲು ಕಾರಣಗಳೇನು ? ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಮಂತ್ರಿ) :

ಅ) 3 ಏತ ನೀರಾವರಿ ಯೋಜನೆ ಸೇರಿದೆ. ಇವುಗಳ ಸ್ಥಳಗಳು ಕೆಳಕಂಡಂತೆ ಇರುತ್ತದೆ.

1) ಹೊಸಹಳ್ಳಿ 2) ಬಾಳೇಬಯಲು 3) ಮಿನಗುಂದ.

ಆ) ಈ ಏತ ನೀರಾವರಿ ಯೋಜನೆಗಳ ಪೂರ್ವಭಾವಿ ತನಿಖಾ ವರದಿಯು ತಯಾರಿಕೆ ಹಂತದಲ್ಲಿರುತ್ತದೆ. ಈ ಯೋಜನೆಗಳ ತಾಂತ್ರಿಕ ಹಾಗೂ ಆರ್ಥಿಕ ಶಕ್ಯತೆಯನ್ನು ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ವಿಜಾಪುರ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆ.

306- ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?